

ಉಸ್ತಾದ್ ಹಫೀಸ್ ಖಾನ್



ಜೇಸುದಾಸ್



ಗಂಗೂಬಾಯಿ ಹಾನಗಲ್

ಕರ್ನಾಟಕ ಸಂಗೀತ ದಿಗ್ಗಜರಲ್ಲೊಬ್ಬರಾಗಿದ್ದ ವಿದ್ವಾನ್ ಜಿ.ಎನ್.ಬಾಲಸುಬ್ರಹ್ಮಣ್ಯಂ ಅವರು ಖಾನ್ ಸಾಹೇಬರ ಸಂಗೀತವನ್ನು ಬಹಳವಾಗಿ ಮೆಚ್ಚುತ್ತಿದ್ದರಂತೆ. ಒಮ್ಮೆ ಆಗಿನ ಮದ್ರಾಸಿನಲ್ಲಿ ಖಾನರ ಸಂಗೀತ ಏರ್ಪಾಡಾಗಿದ್ದಿತು. ಅವರ ಹಾಡುಗಾರಿಕೆಯನ್ನು ಕೇಳಿ ಅತೀವ ಸಂತಸ ಪಟ್ಟ ಜಿ ಎನ್ ಬಿ ಅವರು ಕಛೇರಿ ಮುಗಿಯುತ್ತಿದ್ದಂತೆಯೇ ಎದ್ದು ಹೋಗಿ ಖಾನ್ ಸಾಹೇಬರ ಕಾಲಿಗೆರಗಿ ನಮಸ್ಕರಿಸಿದರಂತೆ!

ಶಹನಾಯಿ ಮಾಂತ್ರಿಕ ಉಸ್ತಾದ್ ಬಿಸ್ಮಿಲ್ಲಾ ಖಾನರ ಶಹನಾಯಿ ವಾದನಕ್ಕೆ ಮನಸೋಲದವರೇ ಇಲ್ಲ! ಖಾನರು ಕಾರ್ಯಕ್ರಮ ನೀಡಲು ವಿದೇಶಗಳಿಗೆ ಭೇಟಿ ಇತ್ತಾಗ, ತಮ್ಮಲ್ಲಿಯೇ ಬಂದು ನೆಲೆಸುವಂತೆ ಹಲವಾರು ದೇಶಗಳು ಅವರನ್ನು ಆಮಂತ್ರಿಸಿದ್ದವಂತೆ. ಆದರೆ ಖಾನ್ ಸಾಹೇಬರು 'ವಿಶ್ವನಾಥನನ್ನು, ನನ್ನ ವಾರಣಾಸಿಯನ್ನು ಅಗಲಿ ಹೋಗಲು ಹೇಗೆ ಸಾಧ್ಯ?' ಎಂದು ಸಾರಾಸಗಟಾಗಿ ನಿರಾಕರಿಸಿ ವಾರಣಾಸಿಯಲ್ಲೇ ಉಳಿದರು. ಬೆಳಗಿನ ಜಾವ ಗಂಗಾ ನದಿಯಲ್ಲಿ ಮಿಂದು, ನಮಾಜ್ ಮುಗಿಸಿ, ವಿಶ್ವನಾಥನ ದೇವಾಲಯದ ಬಳಿ ಕುಳಿತು ಕೆಲಕಾಲ ಶಹನಾಯಿ ನುಡಿಸುವುದು ಅವರ ಪರಿಪಾಠವಾಗಿದ್ದಿತು.

ಮೈಸೂರಿನ ಕಾಲೇಜೊಂದರಲ್ಲಿ ಒಮ್ಮೆ ಬಿಸ್ಮಿಲ್ಲಾ ಖಾನರ ಸಂಗೀತ ಕಛೇರಿ ಏರ್ಪಾಡಾಗಿತ್ತು. ವಿವಿಧ ಧರ್ಮ, ಪಂಗಡಗಳ ಚಿಹ್ನೆಗಳನ್ನುಳ್ಳ ಚಿತ್ರಪಟಗಳು ಅಲ್ಲಿಯ ಸಭಾಂಗಣದ ಗೋಡೆಯನ್ನು ಅಲಂಕರಿಸಿದ್ದವು. ಜನ ಮೈಮರೆತು ಅವರ ವಾದನವನ್ನು ಕೇಳಿ ತಲೆದೂಗುತ್ತಿದ್ದರು. ಇದ್ದಕ್ಕಿದ್ದಂತೆ ಖಾನ್ ಸಾಹೇಬರು ತಮ್ಮ ವಾದನವನ್ನು ನಿಲ್ಲಿಸಿ, 'ಇದು ಯಾವ ಜಾತಿ?' ಎಂದು ಕೇಳಿದರಂತೆ! ಜನರೆಲ್ಲ ಕಕ್ಕಾಬಿಕ್ಕಿಯಾದರು. ಸಭಾಂಗಣದಲ್ಲಿ ಒಂದು ರೀತಿಯ ಮೌನ ಆವರಿಸಿತು. ಈ ಪ್ರಶ್ನೆಗೆ ಯಾರ ಬಳಿ ಏನು ಉತ್ತರ ತಾನೇ ಇರಲು ಸಾಧ್ಯ? ಅನಂತರ ಖಾನ್ ಸಾಹೇಬರು ನಗುತ್ತ ' ಸಂಗೀತಕ್ಕೆ ಧರ್ಮ, ಜಾತಿಗಳಾವುವೂ ಇಲ್ಲ! ಜನರನ್ನು ಒಗ್ಗೂಡಿಸುವುದೇ ಅದರ ಕಾರ್ಯ' ಎಂದು ಹೇಳಿ ನಸುನಗುತ್ತಾ ಕಾರ್ಯಕ್ರಮ ಮುಂದುವರಿಸಿದರು.

ಪ್ರಖ್ಯಾತ ಗಾಯಕಿ ಪರವೀನ್ ಸುಲ್ತಾನ ಅವರು ಮೈಸೂರಿನಲ್ಲಿ ನೀಡಿದ ಮೊತ್ತ ಮೊದಲ ಕಛೇರಿಯಲ್ಲಿ ಅತ್ಯಂತ ಭಾವಪೂರ್ವಕವಾಗಿ ಹಾಡಿದ 'ಭವಾನಿ ದಯಾನಿ, ಮಹಿಷಾಸುರ ಮರ್ದಿನಿ' ಯು ಮೈಸೂರಿನ ಜನತೆಯನ್ನು ಸಮ್ಮೋಹನಗೊಳಿಸಿತ್ತು! ಅದನ್ನು ಮರೆಯುವಂತೆಯೇ ಇಲ್ಲ. ಇಂದಿಗೂ ಜನರ ಮೆಚ್ಚಿನ ಕೃತಿ ಅದು.

ಖ್ಯಾತ ಹಿಂದೂಸ್ತಾನಿ ಗಾಯಕಿ ಗಂಗೂಬಾಯಿ ಹಾನಗಲ್ ಅವರಿಗೆ ಪ್ರತಿಷ್ಠಿತ ಪ್ರಶಸ್ತಿಯೊಂದು ಬಂದ ಸಂದರ್ಭದಲ್ಲಿ, ಮೈಸೂರು ವಿಶ್ವವಿದ್ಯಾನಿಲಯದ ಶತಮಾನೋತ್ಸವ ಭವನದ ಸಭಾಂಗಣದಲ್ಲಿ ಅವರಿಗೆ ಸನ್ಮಾನ ಸಮಾರಂಭ ಏರ್ಪಡಿಸಲಾಗಿತ್ತು. ಆ ಸಂದರ್ಭದಲ್ಲಿ ವಿವಿಧ ಸಂಗೀತ ಸಭೆಗಳು, ಅಭಿಮಾನಿಗಳು ಸಹ ವೇದಿಕೆಗೆ ಬಂದು ಅವರಿಗೆ ಹಾರ ಹಾಕಿ ಸನ್ಮಾನಿಸಿದರು. ಇವರ ಪೈಕಿ ಗಂಗೂಬಾಯಿಯವರ ಕೋಮಿನವರು ಎಂದು ಪರಿಚಯಿಸಿಕೊಂಡು ಬಂದು ಸನ್ಮಾನ ಮಾಡಿದ ಒಂದು ತಂಡವೂ ಇತ್ತು. ಸನ್ಮಾನ ಮುಕ್ತಾಯಗೊಂಡ ನಂತರ ಭಾಷಣ ಮಾಡಬೇಕೆಂದು ಗಂಗೂಬಾಯಿಯವರನ್ನು ಕೇಳಿಕೊಂಡಾಗ ಅವರು ಭಾಷಣದ ನಡುವೆ, 'ನಾವು, ಸಂಗೀತಗಾರರು ಸಂಗೀತವೇ ಧರ್ಮ ಎಂದು ನಂಬಿರುವವರು. ಆದರೆ ಜನ ಬಂದು ಜಾತಿ ಮಾತನಾಡುತ್ತಾರಲ್ಲಾ!' ಎಂದು ಬಿಟ್ಟರು!

ಜನಪ್ರಿಯ ಕರ್ನಾಟಕ ಸಂಗೀತ ಗಾಯಕ ಜೇಸುದಾಸ್ ಅವರು ಪ್ರತಿ ವರ್ಷ ತಮ್ಮ ಹುಟ್ಟು ಹಬ್ಬದ ದಿನದಂದು ಕೊಲ್ಲೂರಿನ ಮುಕಾಂಬಿಕಾ ದೇವಾಲಯಕ್ಕೆ ಭೇಟಿ ಇತ್ತು ಸರಸ್ವತಿಯನ್ನು ಕುರಿತ ರಚನೆಗಳನ್ನು ಹಾಡಿ ಬರುತ್ತಾರಂತೆ. ಜಿ.ದೇವರಾಜನ್ ಅವರ 'ಹರಿವರಸನಂ' ಎಂಬ ಭಕ್ತಿ ಗೀತೆಯನ್ನು ಅವರು ಶಬರಿಮಲೈ ದೇವಸ್ಥಾನದಲ್ಲಿ ಹಾಡಿದರಂತೆ. ಈಗಲೂ ಪ್ರತಿ ನಿತ್ಯ ಆ ದೇವಸ್ಥಾನದಲ್ಲಿ ಅವರ ಈ ಧ್ವನಿಮುದ್ರಿಕೆಯನ್ನು ಪ್ರಸಾರ ಮಾಡುತ್ತಾರೆ. 'ಎಲ್ಲ ಮತಗಳೂ ಸಾರುವುದು ಒಂದೇ: ಅದು ಪ್ರೀತಿ' ಎಂಬುದು ಜೇಸುದಾಸ್ ಅವರ ನಂಬಿಕೆ. ಪ್ಯಾರಿಸಿನಲ್ಲಿ ನಡೆದ 'ಶಾಂತಿಗಾಗಿ ಸಂಗೀತ' ಎಂಬ ಕಾರ್ಯಕ್ರಮದಲ್ಲಿ ಯುನೆಸ್ಕೊ ಸಂಸ್ಥೆಯು ಜೇಸುದಾಸ್ ಅವರಿಗೆ 'ಶಾಂತಿ ಹಾಗೂ ಸಂಗೀತದಲ್ಲಿ ಅಸಾಧಾರಣ ಸಾಧನೆ'ಗಾಗಿ ಗೌರವ ಪ್ರಶಸ್ತಿ ನೀಡಿ ಸನ್ಮಾನಿಸಿತು.

ಅರವತ್ತರ ದಶಕದಲ್ಲಿ ಅಮೇರಿಕದಿಂದ ಬಂದು ಕರ್ನಾಟಕ ಶಾಸ್ತ್ರೀಯ ಸಂಗೀತ ಕಲಿತು, ವ್ಯಾಸರಾಯರ 'ಕೃಷ್ಣಾ ನೀ ಬೇಗನೆ ಬಾರೋ' ಎಂಬ ಕೃತಿ ಹಾಡಿದರು ಜಾನ್ ಬಿ.ಹಿಗಿನ್ಸ್ ಅವರು. ಶ್ರೋತೃವರ್ಗದಲ್ಲಿದ್ದ ಕೃಷ್ಣನ ಭಕ್ತರು ಕೆಲವರು, 'ಕೃಷ್ಣ ಪ್ರತ್ಯಕ್ಷನಾಗಿಯೇ ಬಿಟ್ಟ' ಎನಿಸಿತು ಎಂದು ಮೆಚ್ಚಿ ಉದ್ಗರಿಸಿದ್ದು ನೆನಪಿದೆ.

ಧರ್ಮ ಜಾತಿ ಕುಲಗಳೆನ್ನದೆ, ಇಂತಹವುಗಳ ಕಲ್ಪನೆಯೂ ಇಲ್ಲದೆ ತಮ್ಮ ಸಂಗೀತದ ಮೂಲಕ ವಿಶ್ವಕ್ಕೆ ಶಾಂತಿ ಸೌಹಾರ್ದತೆಯನ್ನು ಸಾರಿದ ಹಿರಿಯ ಚೇತನಗಳು ಇವರು. ದೇವನೊಬ್ಬ ನಾಮ ಹಲವು ಎಂದು ನಂಬಿದವರು. ಇಂದಿನ ವಿಶ್ವ ಜನತೆಗೆ ಇಂತಹ ಶಾಂತಿದೂತರು ಮಾದರಿಯಾಗಬೇಕಲ್ಲವೇ?!